# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1481
ಸದಸ್ಯರ ಹೆಸರು : ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾಗಿದ ದಿನಾಂಕ : 17-03-2026
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಮುದುಗಲ್ಲು ಪಟ್ಟಣಕ್ಕೆ KUIDFC ವತಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ; ಈ ಯೋಜನೆಯು ಪ್ರಸ್ತುತ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಮುದಗಲ್ ಪಟ್ಟಣದಲ್ಲಿ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ 9 ಪಟ್ಟಣಗಳ ಯೋಜನೆಯಡಿ ಕುಡಿಯುವ ನೀರು ಸರಬರಾಜು ಉನ್ನತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ 381 ಪಿ.ಆರ್.ಜೆ 2017 ದಿನಾಂಕ:15.12.2017 ರಲ್ಲಿ ಅನುಮೋದನೆ ನೀಡಲಾಗಿದೆ.<br><br>ಈ ಯೋಜನೆಯ ಒಟ್ಟು ಅಂದಾಜು ಮೊತ್ತ ರೂ.34.96 ಕೋಟಿಗಳಾಗಿದ್ದು, ಈ ಪೈಕಿ ಶೇ.50 ರಷ್ಟು ಮೊತ್ತ ರೂ.17.48 ಕೋಟಿಗಳನ್ನು ಸರ್ಕಾರದ ಅನುದಾನದಿಂದ ಮತ್ತು ಶೇ.50 ರಷ್ಟು ಮೊತ್ತ ರೂ.17.48 ಕೋಟಿಗಳನ್ನು ಪುರಸಭೆಯ ಪರವಾಗಿ ಮಾರುಕಟ್ಟೆ ಸಾಲ ಪಡೆದು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿತ್ತು.<br><br>ಅದರಂತೆ, ಮುದಗಲ್ ಪಟ್ಟಣದ ಕಾಮಗಾರಿಯನ್ನು ರೂ.31.29 ಕೋಟಿಗಳಲ್ಲಿ ನಿರ್ವಹಿಸಲು ಗುತ್ತಿಗೆದಾರರಾದ ಮೇ\|\| ಎ.ಎಸ್.ಆರ್ ಇಂಜಿನಿಯರಿಂಗ್ & ಪ್ರಾಜೆಕ್ಟ್ಸ್ ಲಿಮಿಟೆಡ್, ಹೈದ್ರಾಬಾದ್ ದಿನಾಂಕ:07.03.2018 ರಂದು ಗುತ್ತಿಗೆ ನೀಡಲಾಗಿರುತ್ತದೆ.<br><br>ಸದರಿ ಕಾಮಗಾರಿಯನ್ನು ದಿನಾಂಕ:07.03.2018 ರಂದು ಪ್ರಾರಂಭಿಸಲಾಗಿದ್ದು, 18 ತಿಂಗಳೊಳಗೆ (06.09.2019) ಪೂರ್ಣಗೊಳಿಸಬೇಕಾಗಿತ್ತು. ಆದರೆ ಕೋವಿಡ್ ಹಾಗೂ ಗುತ್ತಿಗೆದಾರರ ವಿಳಂಭ ಧೋರಣೆಯಿಂದಾಗಿ ಕೇವಲ ಶೇ. 27% ರಷ್ಟು ಪ್ರಗತಿ ಮಾತ್ರ ಸಾಧಿಸಿದ್ದ ಕಾರಣ (ರೂ.6.62 ಕೋಟಿ ವೆಚ್ಚ) ಮುದಗಲ್ ಪಟ್ಟಣದ ಗುತ್ತಿಗೆಯನ್ನು ದಿನಾಂಕ:10.07.2023 ರಂದು |
| ಆ) | ಬಂದಿದ್ದಲ್ಲಿ, ಪುನಃ ಪ್ರಾರಂಭಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು; | |

| | | |
|---|---|---|
| | | ರದ್ದುಪಡಿಸಿ ಕಾಮಗಾರಿಯನ್ನು ಯಥಾಸ್ಥಿತಿಯಲ್ಲಿ ಮುದಗಲ್ ಪುರಸಭೆಗೆ ಹಸ್ತಾಂತರಿಸಲಾಗಿರುತ್ತದೆ.<br><br>ಮುದಗಲ್ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಬಾಕಿ ಕಾಮಗಾರಿಗಳನ್ನು ನಿರ್ವಹಿಸುವುದರ ಕುರಿತು ದಿನಾಂಕ:23.01.2024 ರಂದು ನೀಡಿರುವ ಆರ್ಥಿಕ ಇಲಾಖೆಯ ಹಿಂಬರಹದಂತೆ, ಅಮೃತ್ 2.0 ರಡಿ ಬಾಕಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಲಭ್ಯತೆ ಇಲ್ಲದೆ ಇರುವುದರಿಂದ ಸದರಿ ಕಾಮಗಾರಿಯ ಒಟ್ಟು ಮೊತ್ತದ ಪೈಕಿ ಗುತ್ತಿಗೆದಾರರಿಂದ ಕಾಸ್ಟ್ & ರಿಸ್ಕ್ ಆಗಿ ವಸೂಲಿ ಮಾಡಬೇಕಾಗಿರುವ ಮೊತ್ತ ರೂ.7.11 ಕೋಟಿಗಳು, ಬಾಕಿ ಸರ್ಕಾರದ ಅನುದಾನ ರೂ.10.86 ಕೋಟಿಗಳು ಮತ್ತು ಶೇ.50 ರಷ್ಟನ್ನು ಪುರಸಭೆಯ ಪರವಾಗಿ ಮಾರುಕಟ್ಟೆ ಸಾಲದ ಮೊತ್ತ ರೂ.17.48 ಕೋಟಿಗಳು ಸೇರಿ ಒಟ್ಟು ಮೊತ್ತ ರೂ.35.45 ಕೋಟಿಗಳನ್ನು ಕ್ರೋಢೀಕರಿಸಿ ಬಾಕಿ ಕಾಮಗಾರಿಗಳನ್ನು ಪುರಸಭೆ ವತಿಯಿಂದ ಪ್ರಾರಂಭಿಸಿ ಪೂರ್ಣಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು. |
| ಇ) | ಇದಕ್ಕಾಗಿ ಬೇಕಾಗಬಹುದಾದ ಅನುದಾನವನ್ನು 2026-27ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಲು ಕ್ರಮ ವಹಿಸಲಾಗುವುದೇ? | ಮುದುಗಲ್ ಪಟ್ಟಣದ ಕುಡಿಯುವ ನೀರಿನ ಯೋಜನೆಯನ್ನು ಕೆ.ಯು.ಐ.ಡಿ.ಎಫ್.ಸಿ ವತಿಯಿಂದ 9 ಪಟ್ಟಣಗಳ ಯೋಜನೆಯಡಿ ಕೈಗೊಳ್ಳಲಾಗಿದ್ದು, ಪ್ರಸ್ತುತ 9 ಪಟ್ಟಣಗಳ ಯೋಜನೆಯು ಮುಕ್ತಾಯಗೊಂಡಿರುತ್ತದೆ. ಆದ್ದರಿಂದ, 2026-27ನೇ ಸಾಲಿನ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. |

ಕಡತ ಸಂಖ್ಯೆ:ನಅಇ 37 ಪಿಆರ್‌ಜೆ 2026

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು